# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\3335\2017\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 24/06/2019

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯು:** ಸರ್ಕಾರಿ ನೌಕರರಾದ ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ಬೆಗ್ಲಿ ಹೊಸಹಳ್ಳಿ ಗ್ರಾಮ ಪಂಚಾಯತ್‌ನ 1) ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಕೆ.ಶಿವಾನಂದ ಕುಮಾರ್ ಮತ್ತು 2) ಅಧ್ಯಕ್ಷರಾಗಿದ್ದ ಶ್ರೀಮತಿ.ಅನಸೂಯಮ್ಮ ರವರ ದುರ್ನಡತೆಯ ಬಗ್ಗೆ.

**********

ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕ್ ಚೇಳೂರು ಹೋಬಳಿ ಪುಲಗಲ್ಲು ಅಂಚೆ ಊದವಾರಪಲ್ಲಿ ಗ್ರಾಮ ನಿವಾಸಿಯಾದ ಶ್ರೀ.ವಿ.ರಾಮಕೃಷ್ಣಪ್ಪ ಬಿನ್ ಲೇಟ್.ಆಂಜನೇಯಲು (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ಬೆಗ್ಲಿ ಹೊಸಹಳ್ಳಿ ಗ್ರಾಮ ಪಂಚಾಯತ್‌ನ ಕಾರ್ಯದರ್ಶಿಯಾಗಿದ್ದ ಶ್ರೀ.ವೆಂಕಟೇಶ (ಇನ್ನು ಮುಂದೆ '1ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ಬೆಗ್ಲಿ ಹೊಸಹಳ್ಳಿ ಗ್ರಾಮ ಪಂಚಾಯತ್‌ಗೆ ಸಂಬಂಧಿಸಿದಂತೆ, 13ನೇ ಹಣಕಾಸು ಯೋಜನೆಯಡಿಯಲ್ಲಿ ದಿನಾಂಕ:01/02/13 ರಿಂದ 17/07/14 ರವರೆಗೆ ಸರ್ಕಾರದಿಂದ ಎಷ್ಟು ಹಣ ಮಂಜೂರಾಗಿದೆ? ಅದರಲ್ಲಿ ಎಷ್ಟು ಹಣ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡಲಾಗಿದೆ? ಎಂಬ ಬಗ್ಗೆ ಕ್ರಿಯಾ ಯೋಜನೆ ಮತ್ತು ಬ್ಯಾಂಕ್ ಫಾರ್ ಶೀಟ್, ನಗದು ಪುಸ್ತಕ ಮತ್ತು ವೋಚರ್‌ಗಳನ್ನು ಮಾಹಿತಿ ಹಕ್ಕು ಅಧಿನಿಯಮದಡಿ ಕೋರಿದ್ದು, ಎದುರುದಾರರು ಬ್ಯಾಂಕ್ ಫಾರ್ ಶೀಟ್ ಮಾತ್ರ ನೀಡಿದ್ದಾರೆ. ಅದನ್ನು ಪರಿಶೀಲಿಸಲಾಗಿ, ₹11,68,386/- ಹಣ ಬಂದಿರುವುದು ಕಂಡು ಬಂದಿದೆ. ಆದರೆ, ನಗದು ಪುಸ್ತಕ ಮತ್ತು ವೋಚರ್‌ಗಳನ್ನು ನೀಡದಿರುವುದರಿಂದ, ಮಾಹಿತಿ ಹಕ್ಕು ಮೇಲ್ಮನವಿ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ದಾಖಲೆಗಳನ್ನು ನೀಡುವಂತೆ ನಿರ್ದೇಶನ ನೀಡಿದ್ದರೂ ಸಹ ಯಾವುದೇ

(71)



ದಾಖಲೆಗಳನ್ನು ನೀಡಿಲ್ಲ. ಸದರಿ ಗ್ರಾಮ ಪಂಚಾಯತ್‌ಗೆ ಮಂಜೂರಾದ ಹಣವನ್ನು ಎದುರುದಾರರು ಅಭಿವೃದ್ಧಿ ಕೆಲಸಗಳಿಗೆ ಬಳಸದೇ ದುರುಪಯೋಗ ಪಡಿಸಿಕೊಂಡಿರುವುದು ಕಂಡು ಬಂದಿದೆಯೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ದೂರುದಾರರು ಮಾಹಿತಿ ಹಕ್ಕು ಕಾಯಿದೆ ಅಡಿ ನೀಡಿದ ಅರ್ಜಿಯಲ್ಲಿ ದಿನಾಂಕ:06/05/15ರಂದು ಅಂಚೆಯ ಮೂಲಕ ಕ್ರಿಯಾ ಯೋಜನೆ, ಬ್ಯಾಂಕ್ ಪಾರ್ ಶೀಟ್ ಮತ್ತು ನಗದು ಪುಸ್ತಕದ ನಕಲು ಪ್ರತಿಗಳನ್ನು ನೀಡಿದ್ದು, ವೋಚರ್‌ಗಳನ್ನು ಲೆಕ್ಕ ತಪಾಸಣೆಗಾಗಿ ನೀಡಿದ್ದು, ಅವುಗಳು ಬಂದ ನಂತರ ಮಾಹಿತಿಯನ್ನು ನೀಡುವುದಾಗಿ ತಿಳಿಸಿದಂತೆ ದಿ:31/12/16ರಂದು ದೂರುದಾರರಿಗೆ ವೋಚರ್‌ಗಳನ್ನು ಅಂಚೆ ಮುಖೇನ ಮಾಹಿತಿಯನ್ನು ನೀಡಿದೆ. ದೂರುದಾರರು ಕರ್ನಾಟಕ ಮಾಹಿತಿ ಆಯೋಗದಲ್ಲಿ ಸಲ್ಲಿಸಿದ ಮೇಲ್ಮನವಿಯಲ್ಲಿ ದೂರುದಾರರಿಗೆ ಕ್ರಿಯಾ ಯೋಜನೆಯನ್ನು ನೀಡಲು ಸೂಚಿಸಿದಂತೆ ದೂರುದಾರರಿಗೆ ಸದರಿ ದಾಖಲೆಯನ್ನು ಅಂಚೆ ಮುಖೇನ ರವಾನಿಸಿರುವ ಅಂಚೆ ಸ್ವೀಕೃತಿ ಪ್ರತಿಯನ್ನು ಪರಿಗಣಿಸಿ, ಮೇಲ್ಮನವಿ ವಿಲೇ ಆಗಿದೆಯೆಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ, ದೂರಿನ ಅಂಶಗಳನ್ನೇ ಪುನರುಚ್ಚರಿಸಿದ್ದಾರೆ.

5. ಮಾರ್ಚ್, 2013 ರಿಂದ ಮೇ, 2014ರ ಅವಧಿಯಲ್ಲಿ ಬೆಗ್ಲಿ ಹೊಸಹಳ್ಳಿ ಗ್ರಾಮ ಪಂಚಾಯತ್‌ನಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಶ್ರೀ.ಕೆ.ಶಿವಾನಂದ ಕುಮಾರ್ ಮತ್ತು ಶ್ರೀಮತಿ.ಅನುಸೂಯಮ್ಮ ರವರುಗಳನ್ನು ಕ್ರಮವಾಗಿ, 2 ಮತ್ತು 3ನೇ ಎದುರುದಾರರುಗಳನ್ನಾಗಿ ಮುಖಪುಟದಲ್ಲಿ ಸೇರಿಸಿ, ಸದರಿಯವರಿಂದ ದೂರಿಗೆ ಆಕ್ಷೇಪಣೆಯನ್ನು ಕೇಳಲಾಗಿ, 2ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

6. ಮೂರನೇ (3ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

BD/35335/17

(12)



ದೂರುದಾರರು ಕೇಳಿದ ದಾಖಲೆಗಳು ಪಂಚಾಯತ್ ಸುಪರ್ದಿಯಲ್ಲಿದ್ದು, ಸಂಬಂಧಪಟ್ಟ ಕಾರ್ಯದರ್ಶಿ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿ ರವರು ದಾಖಲೆಗಳನ್ನು ನೀಡಬೇಕಿರುವುದರಿಂದ, ದೂರನ್ನು ಕೈಬಿಡಲು ಕೋರಿದ್ದಾರೆ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಹದಿಮೂರನೇ [13ನೇ] ಹಣಕಾಸು ಯೋಜನೆಯಡಿ ಸರ್ಕಾರದಿಂದ ಬೆಗ್ಲಿಹೊಸಹಳ್ಳಿ ಗ್ರಾಮ ಪಂಚಾಯತ್‌ಗೆ ಬಿಡುಗಡೆಯಾಗುವ ಅನುದಾನವು ಪ್ರಗತಿ ಗ್ರಾಮೀಣ ಬ್ಯಾಂಕ್, ಮಧುವತಿ ಶಾಖೆಯಲ್ಲಿ ಪಂಚಾಯತ್‌ನ ಖಾತೆ ಸಂ:10757100005845ಗೆ ಜಮಾ ಆಗುತ್ತಿದೆಯೆಂಬ ಅಂಶವು ಬ್ಯಾಂಕ್ ಪಾಸ್ ಪುಸ್ತಕದಲ್ಲಿ ಕಂಡು ಬಂದಿದೆ. ಏಪ್ರಿಲ್, 2013 ರಿಂದ ಏಪ್ರಿಲ್, 2014ರ ಅವಧಿಯಲ್ಲಿ ಸದರಿ ಖಾತೆಗೆ ಜಮಾ ಆದ ಹಣದ ವಿವರ ಈ ಕೆಳಗಿನಂತಿದೆ –

| ಕ್ರ. ಸಂ. | ದಿನಾಂಕ | ಮೊತ್ತ ₹ ಗಳಲ್ಲಿ |
|---|---|---|
| 1 | 05/07/13 | 178065.00 |
| 2 | 25/07/13 | 306225.00 |
| 3 | 06/01/14 | 217787.00 |
| 4 | 28/01/14 | 5000.00 |
| 5 | 21/04/14 | 380776.00 |
| ಒಟ್ಟು ಮೊತ್ತ | | 1087853.00 |

2) ಏಪ್ರಿಲ್, 2013 ರಿಂದ ಏಪ್ರಿಲ್, 2014ರ ಅವಧಿಯಲ್ಲಿ ಸದರಿ ಖಾತೆಯಿಂದ ಈ ಕೆಳಗಿನ ದಿನಾಂಕಗಳಂದು ಹಣ ಖರ್ಚು ಮಾಡಿರುವುದು ಬ್ಯಾಂಕ್ ತಃಖ್ತೆ, ನಗದು ವಹಿ ಮತ್ತು ಡಿಸಿ ಬಿಲ್ಲಿನ ವಹಿಯ ಪ್ರತಿಗಳಲ್ಲಿ ಕಂಡು ಬಂದಿದೆ –

| ಕ್ರ.ಸಂ. | ಹೆಸರು ಶ್ರೀ.\ ಶ್ರೀಮತಿ. | ಚೆಕ್ ಸಂಖ್ಯೆ & ದಿನಾಂಕ | ಮೊತ್ತ ₹ಗಳಲ್ಲಿ |
|---|---|---|---|
| 1 | ಮನು ಇಂಜಿನಿಯರಿಂಗ್ ವರ್ಕ್ಸ್ | 796737, 02/04/13 | 8490.00 |
| 2 | ಎಂಜಿಆರ್ ಪಿಜಿಬಿ | 796745, 02/04/13 | 7750.00 |
| 3 | ಶ್ರೀ ಮಂಜುನಾಥ ಕೆಮಿಕಲ್ಸ್ | 796743, 01/04/13 | 9000.00 |
| 4 | ಶ್ರೀನಿವಾಸ | 796738, 27/03/13 | 13032.00 |
| 5 | ಶ್ರೀನಿವಾಸ | 796744, 01/04/13 | 2000.00 |
| 6 | ಸಾಗರ್ ಆಡಿಯೋ ಮೊಬೈಲ್ | 796746, 01/04/13 | 6500.00 |
| 7 | ಚೌಡೇಶ್ವರಿ ಏಜೆನ್ಸಿ | 796850, 12/04/13 | 18112.00 |
| 8 | ನಾಗರಾಜ ಟ್ರೇಡರ್ಸ್ | 796740, 12/04/13 | 102762.00 |

73



| | | | |
|---|---|---|---|
| 9 | ಸಂತೋಷ್ | 000042, 18/04/13 | 2500.00 |
| 10 | ನಾಗರಾಜ ಟ್ರೇಡರ್ಸ್ | 000041, 18/04/13 | 28402.00 |
| 11 | ನಾಗರಾಜ ಟ್ರೇಡರ್ಸ್ | 796749, 18/04/13 | 62131.00 |
| 12 | ಐಎಸ್‌ಸಿ 4413 | 796747, 18/04/13 | 10000.00 |
| 13 | ಮನು ಇಂಜಿನಿಯರಿಂಗ್ ವರ್ಕ್ಸ್ | 000044, 19/04/13 | 8300.00 |
| 14 | ಅಂಜನಪ್ಪ | 000045, 19/04/13 | 5000.00 |
| 15 | ಶ್ರೀನಿವಾಸ ಸ್ಟೋರ್ | 000043, 19/04/13 | 5530.00 |
| 16 | ಚೌಡೇಶ್ವರಿ ಏಜೆನ್ಸಿ | 000046, 26/04/13 | 23180.00 |
| 17 | ಐಎಸ್‌ಸಿ 4813 | 796748, 03/05/13 | 5000.00 |
| 18 | ಅಂಜನಪ್ಪ | 000047, 20/05/13 | 1450.00 |
| 19 | ಮಂಜುನಾಥ | 000050, 10/06/13 | 9540.00 |
| 20 | ಆರ್.ಛಲಪತಿ | 000133, 20/06/13 | 5800.00 |
| 21 | ಲಕ್ಷ್ಮಿ ಇಂಜಿನಿಯರಿಂಗ್ | 000131, 20/06/13 | 6095.00 |
| 22 | ನಾರಾಯಣ ಸ್ವಾಮಿ | 000135, 28/06/13 | 9185.00 |
| 23 | ಐಎಸ್‌ಸಿ 63/13 | 000132, 28/06/13 | 4891.00 |
| 24 | ಬಿಎನ್‌ಎಂಎ | 000136, 29/06/13 | 5106.00 |
| 25 | ಲಕ್ಷ್ಮಿ ಇಂಜಿನಿಯರಿಂಗ್ | 000134, 01/07/13 | 6370.00 |
| 26 | ಬ್ಯಾಂಕ್ ಆಫ್ ಬರೋಡ | 000137, 09/07/13 | 14760.00 |
| 27 | ಐಎಸ್‌ಸಿ 6713 | 000049, 18/07/13 | 3600.00 |
| 28 | ಪ್ರಭಾಕರ್ | 000138, 12/08/13 | 8000.00 |
| 29 | ಐಎಸ್‌ಸಿ 7513 | 000251, 03/09/13 | 536000.00 |
| 30 | ಎ.ಸೀನಪ್ಪ | 000252, 03/10/13 | 900.00 |
| 31 | ನಾರಾಯಣ ಸ್ವಾಮಿ | 000253, 05/10/13 | 1500.00 |
| 32 | ಎಸ್‌ಆರ್ ಕಂಪ್ಯೂಟರ್ಸ್ | 000254, 04/12/13 | 1600.00 |
| 33 | ಬಿ.ಪ್ರಭಾಕರ್ | 000255, 07/12/13 | 12700.00 |
| 34 | ನಾಗರಾಜ ಟ್ರೇಡರ್ಸ್ | 000256, 16/01/14 | 155647.00 |
| 35 | ಎ.ಸೀನಪ್ಪ | 000257, 16/01/14 | 4140.00 |
| 36 | ಎ.ಗೋವಿಂದರಾಜು | 000258, 20/01/14 | 8991.00 |
| 37 | ನಾಗಪ್ಪ ಕೂಟೇರಿ | 000260, 03/02/14 | 15000.00 |
| 38 | ಮಂಜುನಾಥ | 797326, 17/02/14 | 15000.00 |
| 39 | ನಾರಾಯಣ ಸ್ವಾಮಿ | 000139, 28/03/14 | 8625.00 |
| **ಒಟ್ಟು ಮೊತ್ತ** | | | 1153589.00 |

BD/5335/17

(74)



3) ಮೇಲಿನ ಉಪ ಖಂಡಿಕೆ–2ರ ಖರ್ಚುಗಳ ಪೈಕಿ ಕ್ರಮ ಸಂಖ್ಯೆ–1 ರಿಂದ 28 ಹಾಗೂ 30 ರಿಂದ 39 ಖರ್ಚುಗಳಿಗೆ ಸಂಬಂಧಿಸಿದಂತೆ, ನಗದು ವಹಿ ಮತ್ತು ಬ್ಯಾಂಕ್ ಪಾಸ್ ಪುಸ್ತಕ ಪ್ರತಿಗಳು ಮಾತ್ರ ಲಭ್ಯವಿದೆ;

4) ಕ್ರಮ ಸಂಖ್ಯೆ–12ರ ಖರ್ಚು ಶ್ರೀ.ಸೀನಪ್ಪ, ಪಂಪ್ ಆಪರೇಟರ್, ಬೆಗ್ಲಿಹೊಸಹಳ್ಳಿ ರವರ ಅಂತ್ಯ ಸಂಸ್ಕಾರಕ್ಕೆ ನೀಡಿದ ಬಾಬ್ತು ಆಗಿದೆಯೆಂದು ನಗದು ವಹಿಯಲ್ಲಿ ಕಂಡು ಬಂದಿದೆ. 13ನೇ ಹಣಕಾಸು ಆಯೋಗದ ಅನುದಾನವನ್ನು ವಿನಿಯೋಗಿಸುವ ಮಾರ್ಗಸೂಚಿಗಳಲ್ಲಿ ಅಂತ್ಯ ಸಂಸ್ಕಾರಕ್ಕೆ ಹಣ ವ್ಯಯಿಸಲು ಅವಕಾಶವಿಲ್ಲ;

5) ಮುಂದುವರೆದು, ಕ್ರಮ ಸಂಖ್ಯೆ–29ರ ಮೊತ್ತವನ್ನು ಬ್ಯಾಂಕ್ ಆಫ್ ಬರೋಡ, ಕೋಲಾರ ಶಾಖೆಯಲ್ಲಿರುವ ಪಂಚಾಯತ್‌ನ ಖಾತೆಗೆ ವರ್ಗಾಯಿಸಿದೆಯೆಂದು ನಗದು ವಹಿಯಲ್ಲಿ ದಾಖಲಾಗಿದೆ. ಬ್ಯಾಂಕ್ ಆಫ್ ಬರೋಡ, ಕೋಲಾರ ಶಾಖೆಯಲ್ಲಿದೆ ಎನ್ನಲಾದ ಪಂಚಾಯತ್‌ನ ಬ್ಯಾಂಕ್ ಖಾತೆಗೆ ಸಂಬಂಧಿಸಿದಂತೆ, ಸೆಪ್ಟೆಂಬರ್, 2013 ರಿಂದ ಡಿಸೆಂಬರ್, 2013ರವರೆಗಿನ ನಗದು ವಹಿಯ ಪ್ರತಿಯನ್ನು ಹೊರತುಪಡಿಸಿ, ಬೇರೆ ಯಾವುದೇ ದಾಖಲೆಗಳಿಲ್ಲ. ಸದರಿ ವಹಿಯನ್ವಯ ದಿನಾಂಕ:11/09/13ರಂದು ಒಟ್ಟು ₹2,50,317/–, ದಿನಾಂಕ:12/09/13ರಂದು ಒಟ್ಟು ₹22,392/–, ದಿನಾಂಕ:16/09/13ರಂದು ₹22,276/–, ದಿನಾಂಕ:18/09/13ರಂದು ₹15,600/–, ದಿನಾಂಕ:23/09/13ರಂದು ₹12,630/–, ದಿನಾಂಕ:24/09/13ರಂದು ₹10,580/–, ದಿನಾಂಕ:25/09/13 ರಂದು ₹7,000/–, ದಿನಾಂಕ:03/10/13ರಂದು ಒಟ್ಟು ₹31,343/–, ದಿನಾಂಕ:22/10/13ರಂದು ₹6,080/–, ದಿನಾಂಕ:23/10/13ರಂದು ₹3,000/–, ದಿನಾಂಕ:01/11/13ರಂದು ₹4,500/–, ದಿ:18/11/13ರಂದು ₹8,991/–, ದಿನಾಂಕ:23/11/13ರಂದು ಒಟ್ಟು ₹20,000/–, ದಿನಾಂಕ:07/12/13ರಂದು ಒಟ್ಟು ₹56,179/–, ದಿನಾಂಕ:20/12/13ರಂದು ಒಟ್ಟು ₹6,250/– ಮತ್ತು ದಿನಾಂಕ:23/12/13ರಂದು ₹2,600/– ಹೀಗೆ ಒಟ್ಟು ₹3,80,269/–ಗಳನ್ನು ಬೇರೆ ಬೇರೆ ಚೆಕ್ಕುಗಳಲ್ಲಿ ಖರ್ಚು ಮಾಡಿರುವುದು ಕಂಡು ಬಂದಿದೆ;

6) ಸದರಿ ಖರ್ಚುಗಳಿಗೆ (ಕ್ರಮ ಸಂಖ್ಯೆ–12ರ ಖರ್ಚು ಹೊರತುಪಡಿಸಿ) ಸಂಬಂಧಿಸಿದಂತೆ ಆಹ್ವಾನಿಸಿದ ದರ ಪಟ್ಟಿ, ಖರೀದಿ ಬಿಲ್ಲು, ರಸೀದಿ, ವೋಚರ್ ಮುಂತಾದ ದಾಖಲೆಗಳಿಲ್ಲ. ಕೆಎಫ್‌ಸಿ ಪರಿಚ್ಛೇದ 17ರ ಪ್ರಕಾರ ಅಗತ್ಯವಿರುವ ಸರಕು ಸಾಮಗ್ರಿಗಳನ್ನು ಮಾರುಕಟ್ಟೆಯಲ್ಲಿ ಖರೀದಿಸುವ ಸಾಧಿಲ್ವಾರು ವೆಚ್ಚದ ಕೈಪಿಡಿ 1958, ನಿಯಮಗಳ ನಿಯಮ 55(49)(ಎ)ರನ್ವಯ ₹5,000/– ಮೀರಿದ ₹1,00,000/–ದವರೆಗಿನ ಖರೀದಿಗಳನ್ನು ಸ್ಪರ್ಧಾತ್ಮಕ ಕೊಟೇಷನ್ ಕರೆಯುವ ಮೂಲಕ ಮಾಡತಕ್ಕದ್ದು. ಕೆಎಫ್‌ಸಿ ಪರಿಚ್ಛೇದ 57ರನ್ವಯ ಪ್ರತಿಯೊಂದು ಖರ್ಚಿನ ಬಗ್ಗೆ ವೋಚರ್‌ಗಳು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಹೊಂದಿರಬೇಕು;

7) ಮುಂದುವರೆದು, ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ನ ಲೆಕ್ಕಪತ್ರ ಮತ್ತು ಬಡ್ಜೆಟ್) ನಿಯಮಾವಳಿಗಳು, 2006ರ ನಿಯಮ 43ರನ್ವಯ ಪ್ರತಿ ಖರ್ಚಿಗೆ ಸಂಬಂಧಿಸಿದಂತೆ ಬಿಲ್ ಅಥವಾ ವೋಚರ್‌ಗಳು ಇರಬೇಕೆನ್ನುವುದು ಕಡ್ಡಾಯವಾಗಿದೆ. ಆದರೆ, ಸದರಿ ಖರ್ಚುಗಳಿಗೆ ಸಂಬಂಧಿಸಿದ ವೋಚರ್‌ಗಳಿಲ್ಲ. ಸದರಿ ಚೆಕ್‌ಗಳನ್ನು ಆಯಾಯ ವ್ಯಕ್ತಿ \ ಸಂಸ್ಥೆ ಹೆಸರಿಗೆ ನೀಡಿದ ಬಗ್ಗೆ ಸ್ವೀಕೃತಿಯನ್ನು

75



ಪಡೆದ ಬಗ್ಗೆ ದಾಖಲೆಯಿಲ್ಲ. ಕಾರಣ, ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ನ ಲೆಕ್ಕಪತ್ರ ಮತ್ತು ಬಡ್ಜೆಟ್) ನಿಯಮಾವಳಿಗಳು, 2006ರ ನಿಯಮಗಳು ಮತ್ತು ಕರ್ನಾಟಕ ಆರ್ಥಿಕ ಸಂಹಿತೆ ನಿಯಮಗಳು ಉಲ್ಲಂಘನೆಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

8) ಹಿಂದೆ ಹೇಳಿದ ಖಂಡಿಕೆಗಳಲ್ಲಿನ ಕಾರಣಗಳಿಗಾಗಿ ಒಟ್ಟು ₹11,53,589.00 ಮೊತ್ತವು ದುರುಪಯೋಗವಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ;

9) ದೂರಿನ 2 ಮತ್ತು 3ನೇ ಎದುರುದಾರರುಗಳು 2013–14ನೇ ಸಾಲಿನಲ್ಲಿ ಕ್ರಮವಾಗಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಅಧ್ಯಕ್ಷರಾಗಿ ಬೆಗ್ಲಿಹೊಸಹಳ್ಳಿ ಗ್ರಾಮ ಪಂಚಾಯತ್‌ನಲ್ಲಿ ಕರ್ತವ್ಯ ನಿರ್ವಹಿಸಿರುವುದು ಕಂಡು ಬಂದಿದೆ. ಮೇಲೆ ಹೇಳಿದ ದುರುಪಯೋಗವಾದ ಮೊತ್ತಕ್ಕೆ ಸದರಿಯವರುಗಳು ಸಮನಾಗಿ ಜವಾಬ್ದಾರರಾಗಿದ್ದಾರೆ.

8. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 2 ಮತ್ತು 3ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

9. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 2 ಮತ್ತು 3ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

10. ದೂರಿನ 1ನೇ ಎದುರುದಾರರು ಸದರಿ ಅವಧಿಯಲ್ಲಿ ಪಂಚಾಯತ್ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದ್ದು, ಸದರಿ ಖರ್ಚುಗಳಲ್ಲಿ 1ನೇ ಎದುರುದಾರರು ಭಾಗಿಯಾಗಿದ್ದಾರೆನ್ನುವ ಬಗ್ಗೆ ದಾಖಲೆಗಳ ಅಭಾವ ಇರುವುದರಿಂದ, 1ನೇ ಎದುರುದಾರರ ವಿರುದ್ಧದ ನಡವಳಿಯನ್ನು ಬಿಟ್ಟಿದೆ.

11. ಮೂರನೇ (3ನೇ) ಎದುರುದಾರರುಗಳು ಪಂಚಾಯತ್ ಅಧ್ಯಕ್ಷರಾಗಿರುವುದರಿಂದ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಅಡಿ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ ಸದರಿಯವರಿಂದ ದುರುಪಯೋಗದ ಮೊತ್ತವನ್ನು ವಸೂಲಿ ಮಾಡಲು ಸಕ್ಷಮ ಪ್ರಾಧಿಕಾರಕ್ಕೆ ನಿರ್ದೇಶಿಸಿದೆ.

BD/3335/17
(76)



12. ಅದಲ್ಲದೆ, 2ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 2ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

13. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anand 25/6

**(ನ್ಯಾಯಾಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತ,**
**ಕರ್ನಾಟಕ ರಾಜ್ಯ.**

24/6